Doc. 479
T-P-2

Reg No B G 155 17 — 5 — 72

55th Year of Publication ‘Satyavadi’ daily, Mysore 4

In the State – The First
Golden Jubilee
Celebrated Paper
★
News, Views, Dharmic
Moral Ethical Matters

ರಾಜ್ಯದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಪೂರೈಸಿದ
ಪತ್ರಿಕೆ

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಬೆಂಗಳೂರಿನಲ್ಲಿ ಖಾಸಗಿ ಬಸ್‌ಗಳ ಓಡಾಟಕ್ಕೆ ಅವಕಾಶ

ಪ್ರಧಾನರಿಗೆ ಪ್ರಶಸ್ತಿ

ಬಂಗ್ಲಾ ದೇಶದ ವಿನೋಚನೆಯಲ್ಲಿ ವಹಿಸಿದ ಪಾತ್ರದ ವಾತ್ಸಲ್ಯತೆಗಾಗಿ ಪೆಕ್ಸಿಕೊ ಶಾಸನ, ಸಂಸ್ಕೃತಿ ಮತ್ತು ಶಾಂತಿ ಪ್ರಶಸ್ತಿಯನ್ನು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ಪಡೆದರು.

★

ಬದಲಾವಣೆ ಇಲ್ಲ

ಮುಂದಿನ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಏನೆನ್ನೆಣ್ಣೆ ತೆರಿಗೆ ಕಡಿಮೆ ವಿನಃ ಮತ್ತಾವ ಬದಲಾವಣೆಯೂ ಇಲ್ಲವೆಂದು ತಿಳಿಸಲಾಯಿತು

★

ಸೇನೆಗೆ ಆಜ್ಞೆ

ಪಾಕೀಸ್ತಾನವು ಸಮರ ಸ್ತಂಭವನ್ನು ಉಲ್ಲಂಘಿಸಿದರೆ ಸೂಕ್ತ ರೀತಿಯಲ್ಲಿ ಎದುರಿಸಲು ಸೇನೆಗೆ ಆಜ್ಞೆ ಕೊಟ್ಟಿರುವುದಾಗಿ ರಕ್ಷಣಾ ಮಂತ್ರಿ ಶ್ರೀ ಜಗಜೀವನರಾಂ ರಾಜ್ಯಸಭೆಯಲ್ಲಿ ತಿಳಿಸಿದರು.

ಖಾಸಗಿ ಬಸ್‌ಗೆ ಅವಕಾಶ ?

ಬೆಂಗಳೂರು ಸಾರಿಗೆ ಸರ್ವಿಸ್‌ನಲ್ಲಿ ಸರಕಾರಕ್ಕೆ ವರ್ಷಕ್ಕೆ ಲಕ್ಷಗಟ್ಟಲೆ ನಷ್ಟವಾಗುತ್ತಿದೆ. ಬಸ್‌ಗಳ ಬದಲಾವಣೆ ಮತ್ತು ಅವುಗಳ ರಿಪೇರಿಗೆ ಋಣ ಹೆಚ್ಚಾಗಿ ತಗುಲುತ್ತಿದೆ ಟಿಕೇಟು ಹಣ ದುರುಪಯೋಗ ಸಾರಿಗೆ ಕೈಗಾರಿಕೆಯಲ್ಲಿ ಮುಷ್ಕರ ಮುಂತಾದವು ಇರುವುದರಿಂದ, ಆ ಮಾರ್ಗಗಳಲ್ಲಿ ಖಾಸಗಿ ಬಸ್‌ಗಳ ಓಡಾಟಕ್ಕೆ ಕೆಲವು ನಿಬಂಧನೆಗಳೊಡನೆ ಅವಕಾಶ ಕೊಡುವ ಯೋಜನೆಯನ್ನು ಸಾರಿಗೆ ಸಚಿವಾಲಯವು ತಯಾರಿಸಿದ್ದು ಅದು ಮಂತ್ರಿಮಂಡಲದ ಪರಿಶೀಲನೆಗೆ ಬರುವುದೆಂದು ಗೊತ್ತಾಗಿದೆ.

○

ವಿಶ್ವಬೇಂಕಿನಿಂದ ಸಾಲ

ಭೂ ಅಭಿವೃದ್ಧಿ ಮತ್ತು ಕೆರೆಯ ನೀರಾವರಿಗಾಗಿ ವಿಶ್ವಬೇಂಕಿನಿಂದ ಸಾಲ ಪಡೆದಿರುವ 7 ರಾಜ್ಯಗಳ ಪೈಕಿ ಮೈಸೂರು ಸಹ ಸೇರಿದೆ. ಒಟ್ಟು ಸಾಲ ರೂ 175 ಕೋಟಿ.

★

ಅಮೇರಿಕಾದ ದಾಳಿ

ಅಮೇರಿಕಾ ಯುದ್ಧ ವಿಮಾನಗಳು ಉತ್ತರ ವಿಯಟ್ನಾಂ ಮೇಲೆ ಬಾಂಬುಗಳ ಸುರಿಮಳೆ ಮಾಡಿ, ಹೈಫಾಂಗ್ ಮತ್ತು ಇತರ ರೇವುಗಳ ಆಚೆ ಸಿಡಿ ಮದ್ದುಗಳನ್ನು ಹೆಚ್ಚಾಗಿ ಹಾಕಿದವೆಂದು ಸೈಗಾನಿಂದ ವರದಿಯೊಂದು ಬಂದಿದೆ.

★

ಚುನಾವಣೆ ಮುಂದಕ್ಕೆ

ಆಂಧ್ರದಲ್ಲಿ ನಡೆಯಬೇಕಾಗಿದ್ದ ಪೌರ ಸಭೆ ಚುನಾವಣೆಗಳನ್ನು ಮೂರು ತಿಂಗಳು ವರೆಗೆ ಮುಂದಕ್ಕೆ ಹಾಕಲಾಗಿದೆ.

ಮಾಸ್ಕೋ ಭೇಟಿ ಉಂಟು

ವಿಯಟ್ನಾಂ ಯುದ್ಧ ತೀವ್ರವಾಗಿ ಇದ್ದರೂ ಅಸೋದಕ್ಕಾ ಅಧ್ಯಕ್ಷ ನಿಕ್ಸನ್‌ರವರ ಮಾಸ್ಕೋ ಭೇಟಿ ಉಂಟೆಂದು ವಾಷಿಂಗ್ಟನ್ ವಾರ್ತೆ ತಿಳಿಸುತ್ತದೆ

●

ದೇವಾಲಯ ತೆರೆಯಲಾಯಿತು

ಕೇದಾರನಾಥದಿಂದ ಬಂದಿರುವ ವರದಿ ಪ್ರಕಾರ, ಗಾರವಾಲ್ ಹಿಮಾಲಯಗಳಲ್ಲಿ ಇರುವ ಶಿವ ಭಗವಂತನ ದೇವಾಲಯವು ಸ್ತೋತ್ರ ಪಠಣವಾದಸಂತರ ಮಂಗಳವಾರ ತೆರೆಯಲಾಯಿತು.

★

ಆರ್ ಎಸ್ ಎಸ್ ಪ್ರತಿಬಂಧಕಕ್ಕೆ ಕರೆ

ಪಾರ್ಲಿಮೆಂಟ್‌ನ ವಿವಿಧ ರಾಜಕೀಯ ಪಕ್ಷಗಳ ನೂರೈವತ್ತು ಸದಸ್ಯರು, ಈಗಿನ ಪಾರ್ಲಿಮೆಂಟ್ ಅಧಿವೇಶನದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಪ್ರತಿಬಂಧಿಸಬೇಕೆಂದು ಸರ್ಕಾರವನ್ನು ಒತ್ತಾಯ ಮಾಡಿದ್ದಾರೆ.

★

ಸೂರ್ಯತಾಪದಿಂದ ಸಾವು

ವಿಪರೀತ ಸೂರ್ಯತಾಪದಿಂದ ಬಿಹಾರಿನಲ್ಲಿ ಒಂದು ವಾರದಲ್ಲಿ 55 ಮಂದಿ ಮರಣವನ್ನು ಹೊಂದಿರುವರು.

○

ಪಕ್ಷೇತರರು ಹೆಚ್ಚು

ಹಾಸನ ಪುರಸಭೆ ಚುನಾವಣೆಯಲ್ಲಿ ಇಪ್ಪತ್ತಮೂರು ಸ್ಥಾನಗಳಲ್ಲಿ ಕಾಂಗ್ರೆಸ್‌ಗೆ 9 ಸ್ಥಾನಗಳು ದೊರೆತಿವೆ. ಉಳಿದವು ಪಕ್ಷೇತರರಿಗೆ ದೊರೆತಿವೆ.

● ಮುಂಬೈಯಲ್ಲಾದ ಅಗ್ನಿ ಅನಾಹುತದಿಂದ 5 ನೂರು ಮನೆಗಳು ನಾಶವಾಗಿ 3 ವಿಠ ಮಂದಿ ನಿರ್ವಾಸಿಕರಾಗಿರುವರು.

ಹಠಾತ್ತನೆ ಮುಷ್ಕರ

ಪಾರ್ಲಿಮೆಂಟ್ ಸದಸ್ಯರೋರ್ವರು ಮೆಲಿಂಗ್ಡನ್ ಆಸ್ಪತ್ರೆಯ ಕೆಲಸಗಾರರೋರ್ವನನ್ನು ಹೊಡೆದು ಬೈದು ಮಾಡಿದರೆಂದು ಮಾಡಿದರೆಂದು ಪ್ರತಿಭಟಿಸಿ ನಾಲ್ಕನೆ ವರ್ಗದ ಕೆಲಸಗಾರರು ಹಠಾತ್ತನೆ ಮುಷ್ಕರ ಹೂಡಿದರೆಂದು ನವ ದೆಹಲಿ ವಾರ್ತೆ.

○

ತೆರೆದ ಮನಸ್ಸು

ರಾಜ್ಯದಲ್ಲಿಯ ಪ್ಲಾಂಟೇರ್ಷನ್‌ಗಳ ಪರಿಮಿತಿಯ ವಿಚಾರದಲ್ಲಿ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸರು ತೆರೆದ ಮನಸ್ಸಿನಿಂದ ಇರುವುದಾಗಿ ಬೆಂಗಳೂರಿನಲ್ಲಿ ಪತ್ರಿಕೆಯವರು ನಡೆಸಿದ ಮಾತುಕತೆಯಿಂದ ವ್ಯಕ್ತವಾಗಿದೆ.

○

ದೊಡ್ಡದು ಮಾಡಬೇಡಿ

ಮೈಸೂರು ಹಾಗೂ ಮಹಾರಾಷ್ಟ್ರ ಗಡಿ ಕಲಹವನ್ನು ದೊಡ್ಡದು ಮಾಡದಂತೆ ಮಹಾರಾಷ್ಟ್ರ ಹಾಗೂ ಮೈಸೂರು ಜನತೆಗೆ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸರು ಮನವಿ ಮಾಡಿರುವರು.

★

ಹಿತಜೊಳ್ಳೆ

ಬೆಂಗಳೂರು— ಮುಸ್ಲಿಂ ಜನಾಂಗವು ಜೀವಿತದಲ್ಲಿ ಪ್ರಾಮಾಣಿಕತೆ, ನಿಷ್ಠಾಪಟ್ಟ ಮತ್ತು ಸರಳತೆ ಅನುಸರಿಸಿ ಸಮಾಜಸೇವೆ ಮಾಡಬೇಕೆಂದು ಪ್ರವಾಸ ಮಂತ್ರಿ ಶ್ರೀ ಅಜೀಜ್ ಸೇಟ್‌ರು ಕಡೂರಿನಲ್ಲಿ ಅವರಿಗೆ ಏರ್ಪಡಿಸಿದ್ದ ಸನ್ಮಾನ ಸಮಾರಂಭದಲ್ಲಿ ಹೇಳಿದರು.

★ ಮೂನಿಕ್‌ನಲ್ಲಿ ನಡೆಯಲಿರುವ ಒಲಂಪಿಕ್ಸ್‌ನಲ್ಲಿ ಪದಕಗಳನ್ನು ಗಳಿಸಿದ ಕ್ರೀಡಾಪಟುಗಳ ಹೆಸರನ್ನು ಪದಕಗಳ ಮೇಲೆ ಕೆತ್ತಲಾಗುವುದು. (ಐ ಪಿ ಎಸ್)

ಛತ್ರಿಗಳಿಗೆ – ಕೊಡೆಗಳಿಗೆ ಬ್ಲಾರಕ್ ರೋಡ್ ಬಾಹುಸಾರ್

ಒಲಂಪಿಕ್ಸ್ ಚಿಪ್ಪೆ

ಮೂನಿಕ್— ಒಲಂಪಿಕ್ಸ್ ಚಿಪ್ಪೆ "ಸ್ಪೆರಲ್" ಟೈಗಳು, ಟೆಂಕಿಪೆಟ್ಟಿಗೆಗಳು ವಿವಿಧ ಬಟ್ಟೆಗಳು, ಎಲ್ಲದರ ಮೇಲೂ ಕಾಣಬಹುದು. 300 ವಿವಿಧ ಪಸ್ತುಗಳ ಮೇಲೆ ಮುದ್ರಿಸುವ ಈ ಚಿಪ್ಪೆಯನ್ನು ಗಂಡೆಸರಿಗೆ ತಯಾರಾದ ಪ್ಯಾಂಟುಗಳ ಜೋಲೂ ನೋಡಬಹುದು. (ಐ ಪಿ ಎಫ್)

★

ಪುರಸಭೆ

ಮೈಸೂರು— ಏಪ್ರಿಲ್ ಮಾಹೆಯ ಮತ್ತೆ ಮುಂದುವರಿದ ಪುರಸಭಾಧಿವೇಶನವು ತಾ॥ 18 ಗುರುವಾರ ಮಧ್ಯಾಹ್ನಾತ್ಪರ 4 ಗಂಟೆಗೆ ನಡೆಯುವುದು.

○

ನಾಟಕೋತ್ಸವ – ನಾಟ್ಯಗೌರವ

ಮೈಸೂರು— ಕರ್ನಾಟಕ ವಿವಿಧ ಭಾಗಗಳಲ್ಲಿ ಹವ್ಯಾಸಿ ರಂಗಭೂಮಿಯು ಜೀವಂತವಾಗಿರಲು ಬಹಳ ಕಾಲದಿಂದ ಶ್ರಮಿಸುತ್ತಿರುವ ಪ್ರೊ। ಆರ್. ಗುಂಡೂರಾಜರವರ್, ಶ್ರೀ ಪರ್ವತವಾಣಿ ಹಾಗೂ ಶ್ರೀ ಜ ಬಿ. ಜೋಶಿ ಅವರುಗಳನ್ನು ಜುಲೈ ತಿಂಗಳಲ್ಲಿ ನಾಟಕಾಭಿಮಾನಿಗಳ ಪರವಾಗಿ ಗೌರವಿಸಲು ಸಮಿತಿಯೋ ಒಂದು ನಿರ್ಮಾನಿಸಿರುತ್ತಾರೆ – ನಾಟಕೋತ್ಸವ – ನಾಟ್ಯಗೌರವ ಸಮಾರಂಭಗಳನ್ನು ಯಶಸ್ವಿಯಾಗಿ ನಡೆಸಿಕೊಡಬೇಕೆಂದೂ ಉದಾರ ಧನಸಹಾಯ ನೀಡಬೇಕೆಂದೂ ಕೋರಲಾಗಿದೆ. ವಿವರಗಳನ್ನು "ಶ್ರೀ-ಸಿಂಧುವಳ್ಳಿ, ಅನಂತಮೂರ್ತಿ, ಸುರುಚಿ, ಸರಸ್ವತಿಪುರಂ, ಮೈಸೂರು 9" ಇವರಿಂದ ಪಡೆಯಬಹುದು.

Quality Printing & Neat Binding

Lakshminarasimha Press

Sivarampet, Mysore

Help The Gorakshana



— Humanitarian Propoganda Monthly ....

Contribute Liberally

to the National Defence Fund

ವುಡ್‌ಲಾಂಡ್ 12-5-72ರಿಂದ ಆವೋಳಿ 2ನೇ ವಾರ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟವರ್ಗ: ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ
ನಿರ್ದೇಶನ: ರಾಶಿ ಸಹೋದರರು ನಿರ್ಮಾಪಕರು: ಎಂ ಜೆ ಎಂ ಸಹೋದರರು
ಪ್ರತಿ ದಿನ 3 ಪ್ರದರ್ಶನಗಳು

ಪ್ರತಿ ದಿನ ಬೆಳಿಗ್ಗೆ 11 ರಿಂದ 12 ಘಂಟೆವರೆಗೆ ಬಾಲ್ಕನಿ ತರಗತಿಗಳಿಗೆ ಮುಂಗಡ ಟಿಕೀಟು ಕೊಡಲಾಗುತ್ತೆ.

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ತುಂಬಿಹರಿಯುತ್ತಿದೆ

ಅಪೇರಾ 11 5 72 ರಿಂದ

.... ಮನಮೋಹಕ ಕನ್ನಡ ಚಿತ್ರ ....

ಭಲೇ ರಾಣಿ

ನಟವರ್ಗ— ಉದಯಕುಮಾರ್, ಶ್ರೀನಾಥ್, ಅಶ್ವತ್ಥ್, ದಿವಂಗತ ನಾಗಪ್ಪ
ಶಕ್ತಿಪ್ರಸಾದ್, ರಮೇಶ್, ತೂಗುದೀಪ ಶ್ರೀನಿವಾಸ್, ಪಂಡರೀಬಾಯಿ
ದೇವಿಕ, ರಮಾದೇವಿ, ಬೇಬಿ ರಾಣಿ, ಮೈಸೂರಿನ ಪೈ॥ ಮೂಗ
ದಿನ 3 ಆಟಗಳು

★

SHAKTI

SUDHA

A Superb Tonic

'ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠನೆನ್ನುವುದು ಸೊಕ್ಕಿನ 'ಕಲ್ಪನೆ' ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ವೈಗಸಾಮ್ರಾಜ್ಯದ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ

ಅನ-ತುಡುಗ

Protect the Cow

Edited Printedand Published by Dharmapracharanirata
M S Krishna Rao (Propretor) at the Satyavadi Press
Chamarajapuram Mysore 4